**ಕದರಡಕೆ (1967)**

1967ರಲ್ಲಿ ಪ್ರಕಟವಾದ ಈ ಸಂಕಲನದಲ್ಲಿ 46 ಕವಿತೆಗಳಿವೆ.ಮಲೆನಾಡಿನಲ್ಲಿ ಅಡಕೆಯ ಕೊಯ್ಲಿನಲ್ಲಿ ಕೊನೆ ತೆಗೆಯುವ ಕೆಲಸ ಮುಗಿದಮೇಲೆ, ಕೊನೆ ತೆಗೆಯುವಾಗ ತೋಟದಲ್ಲಿ ಉದುರಿ ಚೆದುರಿ ಬಿದ್ದ ಅಡಕೆ ಕಾಯಿಗಳನ್ನು ಆರಿಸಿ ಸಂಗ್ರಹಿಸುತ್ತಾರೆ. ಅಂತಹ ಅಡಕೆಯನ್ನು ಕದರಡಕೆ ಎನ್ನುತ್ತಾರೆ. ಹಾಗೆಯೇ ಇಲ್ಲಿನ ಕವಿತೆಗಳು ಕವಿಯ ಜೀವನದುದ್ದಕ್ಕೂ, ಹಲವಾರು ಸಂದರ್ಭಗಳನ್ನು ಆಧರಿಸಿ ರಚಿತವಾದವುಗಳು ಹಾಗೂ ಅಲ್ಲಿಯವರೆಗೂ ಅಪ್ರಕಟಿತವಾದವುಗಳಾಗಿದ್ದವು. ಅವನ್ನೆಲ್ಲಾ ಒಟ್ಟುಗೂಡಿಸಿ ಕದರಡಕೆ ಎಂಬ ಹೆಸರಿನಲ್ಲಿ ಪಪ್ರಕಟಿಸಲಾಗಿದೆ. ಮಲೆನಾಡಿಗೆ ಓಡುವುದು ಮನ ಮೊದಲಾದ ದೀರ್ಘ ಕವಿತೆಗಳಿರುವಂತೆ ಆರೇಳು ಸಾಲಿನ ಪದ್ಯಗಳೂ ಇಲ್ಲಿವೆ. ಶ್ರೀ ತಿಪ್ಪೇಸ್ವಾಮಿಯವರ ವರ್ಣಚಿತ್ರಗಳಿಂದ ಪ್ರೇರೇಪಣೆಗೊಂಡು ರಚಿತವಾದ ಕವಿಶೈಲದಿಂದ ಕುಂದಾದ್ರಿ ಪದ್ಯ ಸಾಹಿತ್ಯಕವಾಗಿಯೂ ಐತಿಹಾಸಿಕವಾಗಿಯೂ ಮಹತ್ವದವುಗಳಾಗಿವೆ.

ಹಸುರು, ಹಸುರು, ಸೊಂಪು;
ಹೆಸರಿಲ್ಲದ ತಂಪು;
ತನಗೆ ತಾನೆ ಇಂಪು;
ಇಲ್ಲ ಬೇರೆ ಪೆಂಪು;
ಅಲ್ಲಿ ಬರಿ ಕುಂವೆಂಪು! .... ದೂರ ....

ಪ್ರತ್ಯಕ್ಷ ಕಂಗೊಳಿಸೆ ಕವಿಶೈಲದಂತರಿಕ್ಷಂ,
ಕಣ್ದೆರೆದ ಮಣ್ಣಿನೊಳೆ ಕಣಸೊಂದು ಮೂಡಿದೋಲ್,
ಕಂಡರಣೆಗೊಂಡು ಮೋಹಿಸಿಹುದೀ ಭವ್ಯದೃಶ್ಯಂ:
ದಿಗುತಟಕೆ ಮಲೆತೆದ್ದ ದಿಕ್ಕರಿಯೆನಲ್ ಕುಂದಾದ್ರಿ!

**ಸಂಕಲನದ ಕವನಗಳು**

1. ಮಲೆನಾಡಿಗೆ ಮನ ಓಡುವುದು!
2. - ಗೆ
3. ವರ್ಣಶಿಲ್ಪಿ ವೆಂಕಟಪ್ಪನವರಿಗೆ
4. ಕಾರ್ಮಿಂಚು
5. ಸೌಂದರ್ಯ
6. ಕಾರಿರುಳಿನಲ್ಲಿ ರುಗ್ಣಶಯ್ಯೆ
7. ವೈಶಾಖ ಸೂರ್ಯೋದಯ
8. ಏನಿದ್ದರೇನಂತೆ? ತಿಮ್ಮು ಇಲ್ಲ!
9. ರಾಮತೀರ್ಥದಲ್ಲಿ
10. ಕುಕ್ಕನಹಳ್ಳಿಯ ಕೆರೆಯ ಏರಿ
11. ರವ ವಿಹೀನ
12. ಅರಳುವುದೆ ಮರ್ಮ
13. ಮುತ್ತು
14. ಪ್ರೇಮವನ್ನುಳುಹಯ್ಯ ಕಾಮವನ್ನಳಿಸಿ!
15. ಮಧ್ಯಾಹ್ನ
16. ನನ್ನ ನಿನ್ನ
17. ಸಂಗೀತಕೆ

ಸುರುಳಿ ಸುತ್ತುತೆ ಗಿರಿಕೆಹೊಡೆದಿರುವ ಆದಿಶೇಷಂ
ನಡುವೆ ನಸು ಹೆಡೆಯೆತ್ತಿ ನಿದ್ರಿಪೋಲ್, ಕುಂದಗಿರಿ
ತನ್ನ ಸುತ್ತಣ ಮಲೆಯರಣ್ಯಶ್ರೇಣಿಗಳ ಮಧ್ಯೆ
ಧೀರಮಿದೆ, ವಿಪಿನಯೋಗದಲಿ ಅದ್ರಿತಪಸ್ವಿ!

ಕಡಲ ಕಡೆಹಕೆ ಮುನ್ನ ಮಂದರವ ಸುತ್ತಿಬಿಗಿದಾ
ವಾಸುಕಿಯ ಪೊರೆಪೊರೆಯ ತೆರೆತೆರೆಯ ನಿಡುಮೆಯ್ಯವೋಲ್
ಮೆರೆಯುತಿಹುದೀ ವಕ್ರವಂಕಿಮ ವಿವಿಧ ಭಂಗಿಯೊಳ್
ಅಟವಿ ಅದ್ರಿಯ ವರ್ಣ ವೀಚೀ ಮಹಾರ್ಣವ

18. ಋಣ ತೀರಲಿ
19. ಕವಿಕಲ್ಪನೆ
20. ದಂಪತಿ ಪ್ರಾರ್ಥನೆ
21. ಹೂವತಿಥಿ
22. ಇದು ಬರಿ ಹೂವಲ್ಲ
23. ಕೃತಘ್ನ
24. ದೀಪಾವಳಿ
25. ಖೆಡ್ಡಾಕ್ಕೆ ಹೋದಂದು ಕಪಿನಿಯ ತೀರದಲ್ಲಿ
26. ಬಂಡೆ – ಕಾಡು – ಹಕ್ಕಿ
27. ಮೊದಲನೆ ಕೋಗಿಲೆ ಅದೊ ಕೂಗುತಿದೆ!
28. ನರ್ತಿಸಿದಳು ಸ್ವರಸುರನಾರಿ
29. ತೆಂಗಿನ ಹೂ
30. ಸೋಮಾರಿಯ ಸಂದೇಶ
31. ಚಂದ್ರೋದಯವಾಯ್ತು
32. ನೀರ್ ನರ್ತಕಿ
33. ಮೂದಲಿಸುತಿದೆ ಸೆಜ್ಜೆಕೋಣೆ
34. ಉಲಿವ ಹಕ್ಕಿ ಕೊಲುತಲಿಹುದೆ?
35. ನೆಳಲ್ ಸನ್ನೆ
36. ಶಿವರಾತ್ರಿಯ ಸೂರ್ಯೋದಯ
37. ಇಂದ್ರಗೋಪ
38. ಕುವೆಂಪು
39. ತೆನೆಯ ತುದಿಯ ಹಕ್ಕಿಗೆ
40. ಕವಿಶೈಲದಿಂದ ಕುಂದಾದ್ರಿ
41. ಹೆಸರಿಲ್ಲದ ತಂಪು
42. ನಿತ್ಯಶಾಲಿಕ್ಷೇತ್ರ
43. ಉದ್ಯಾನ ಶಾದ್ವಲ
44. ಮಾಗಿಯ ಹೊತ್ತಾರೆ ಶ್ರೀ ಚಾಮುಂಡಿ
45. ಮಗಳಿಗೆ ಹರಕೆ
46. ಭೂರ್ಭುವಸ್ಸುವರ್ವಶಿ!

ಸ್ಥೂಲದೇಹವನಿಲ್ಲಿ ಕಳಚಿಟ್ಟು, ಸೂಕ್ಷ್ಮತನು
ತಾನಾಗಿ, ಕಲ್ಪನೆಯ ಹಾರುತಟ್ಟೆಯನೇರಿದೋಲ್
ಕಾಲ ದೇಶವನುತ್ತರಿಸಿ, ಸಹ್ಯಗಿರಿಕಂದರದ
ಸಂಗಾತಿಯಾಗಿ ನಮ್ಮೋನ್ನತಂಗಳನಲೆದು
ಧ್ಯಾನ ಸಂಮಗ್ನನಾದೆನ್ ರಸದ ಯಾತ್ರೆಯಲಿ,
ಹೂಹೂವ ಎಲೆಎಲೆಯ ಅಲೆಅಲೆಯ ಈಸೀಸಿ,
ಬಿದಿರ್ಮೆಳೆಯ ಕಣಿಚವರಿಯುಯ್ಯಾಲೆಯಂ ಬೀಸಿ!

ನಗರದ ಗಡಿಬಿಡಿಯಲಿ ನಾ ಸಿಲುಕಲು
ಮನ ಮಲೆನಾಡಿಗೆ ಓಡುವುದು!
ಮುದ್ದಿಸುವೆಲರೊಳು ಕುಣಿಯುವ ತೆರೆಯೊಲು
ಸುಖಶಾಂತಿಯೊಳೋಲಾಡುವುದು!
ಬೇಡನ ಬಲೆಯಿಂ ಬಿಡುಗಡೆ ಹೊಂದಿದ
ತರುಣ ಕುರಂಗದ ಜವದಿಂದ
ಸಂತೆಯ ಸದ್ದಿನ ಸುಳಿಯೊಳು ನಾನಿರೆ
ಮಲೆನಾಡಿಗೆ ಮನ ಓಡುವುದು.
ನಲ್ಲನನಪ್ಪುವ ನಲ್ಲೆಯ ತೆರದಲಿ
ತಾಯಿಯನಪ್ಪುವ ಮಗುವಿನ ತೆರದಲಿ
ಗಂಗೆಯನಪ್ಪುವ ಯಮುನೆಯ ತೆರದಲಿ
ದೇವರನಪ್ಪುವ ಭಕ್ತನ ತೆರದಲಿ
ಮನ ಮಲೆನಾಡನು ಕೂಡುವುದು;
ಕರಗಿ ಮುಳುಗಿ ತೇಲಾಡುವುದು!
ಮಲೆಯೊಳು ಬನದೊಳು ಬೆರೆಯುವುದು;
ಪುರದ ಅಶಾಂತಿಯು ತೊರೆಯುವುದು.